ಕಳೆಯುವುದಕ್ಕೆ ಸಿಟಿಯನ್ನೆಲ್ಲಾ ಸುತ್ತಾಡಿದಳು. ಸ್ಟಾರ್ ಹೋಟೇಲಿನ ಮುಂದೆ ಕಾರನ್ನು ನಿಲ್ಲಿಸಿ ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ಮಧ್ಯಾಹ್ನದ ಊಟವನ್ನು ಮುಗಿಸಿದವಳಿಗೆ ಇನ್ಸ್‌ಪೆಕ್ಟರ್‌ನನ್ನು ಕಂಡು ವಿಷಯ ತಿಳಿಸುವುದೇ ಸರಿಯೆಂದು ಕಂಡಿತು. ಅದಕ್ಕಾಗಿಯೇ ಅವಳು ಕಾರನ್ನು ಪೊಲೀಸ್ ಠಾಣೆಯತ್ತ ಓಡಿಸಿದಳು.

ಕಾರನ್ನು ಠಾಣೆಯ ಎದುರಿನ ಮೇ ಫ್ಲವರ್ ಮರದ ಕೆಳಗೆ ನಿಲ್ಲಿಸಿ ಒಳಗೆ ನಡೆದಳು. ಅಧಿಕಾರಿ ಕೋರ್ಟ್‌ನಿಂದ ಮರಳಿರಬಹುದೆಂದು ಅವಳು ಸ್ವಲ್ಪ ಸಮಯ ಬಿಟ್ಟೇ ಅಲ್ಲಿಗೆ ಬಂದಿರುವುದು. ಅವಳ ಊಹೆ ನಿಜವಾಗಿತ್ತು. ಇನ್ಸ್‌ಪೆಕ್ಟರ್ ರಾಜಧಾನಿ ತನ್ನ ಛೇಂಬರಿನಲ್ಲಿ ಕುಳಿತು ಯಾವುದೋ ಕಡತವನ್ನು ಪರಿಶೀಲಿಸುತ್ತಿದ್ದ. ಪಿಸಿ ಸಾರಂಗ ಹೊರಗೆ ನಿಂತು ಬಂದವರನ್ನು ವಿಚಾರಿಸಿ ಅವರಿಗೆ ಬೇಕಿದ್ದ ಮಾಹಿತಿಯನ್ನು ನೀಡುತ್ತಿದ್ದ.

ಮೇನಕಾಳ ದೃಷ್ಟಿ ಪಿಸಿಯತ್ತ ಸರಿಯಿತು. ಅವಳು ಅತ್ತ ನಡೆದು ಅವನನ್ನು ವಿಚಾರಿಸಿದಳು.

' ಇನ್ಸ್‌ಪೆಕ್ಟರ್ ಅನ್ನು ಕಾಣಬೇಕಿದೆ' ಅನುಮತಿಯ ಅವಶ್ಯಕತೆ ಇಲ್ಲವೆನ್ನುವುದು ಅವಳ ಅಭಿಪ್ರಾಯ. ಆದರೆ ಸಾರಂಗ ತನ್ನ ಅಧಿಕಾರಿಯ ಬಳಿ ಯಾರನ್ನಾದರೂ ಕಳುಹಿಸುವುದ್ದಿದ್ದರೆ ನೂರಾರು ಪ್ರಶ್ನೆಗಳನ್ನು ಹಾಕಿಯೇ ಕಳುಹಿಸುತ್ತಿದ್ದುದ್ದು. ಮೇನಕಾಳನ್ನು ನೋಡಿದ ಸಾರಂಗ ಮೇನಕಾಗೆ ಹೋದಾಗಿನ ಘಟನೆಯನ್ನು ನೆನಪಿಸಿಕೊಂಡ. ಉರಿದು ಬೀಳುವ ಅವಳ ಸ್ವಭಾವವನ್ನು ನೋಡಿದ್ದ. ಆದರೂ ತನ್ನ ಚಾಳಿಯನ್ನು ಬಿಡದಂತೆ ಒಂದೊಂದೇ ಪ್ರಶ್ನೆಯನ್ನು ಆರಂಭಿಸಿದ.

'ತಾವು ಯಾರು? ಎಲ್ಲಿಂದ ಬಂದಿರುವಿರಿ' ಮೊದಲ ಪ್ರಶ್ನೆಯ ಬಾಲಕ್ಕೆ ಇನ್ನೊಂದು ಪ್ರಶ್ನೆ ಅಂಟಿಕೊಂಡಿತ್ತು.

'ನಾನು ಮೇನಕಾ. ಈ ಹಿಂದೆ ನೀವು `ಮೇನಕಾ' ಬಂಗಲೆಗೆ ಬಂದಿದ್ದೀರಲ್ಲವೆ. ನಿಮ್ಮನ್ನು ನಾನು ಫಾರ್ಮ್ ಹೌಸ್‌ನ ಬಳಿ ನೋಡಿದ್ದೆ. ಈಗ ನೆನಪಾಯಿತೆ?' ಮರು ಪ್ರಶ್ನೆ ಎಸೆದಾಗ ಪಿಸಿ ಒತ್ತಡಕ್ಕೆ ಸಿಲುಕಿದವನಂತೆ ಮುಖ ಹಿಂಡಿದ. ಮುಂದಿನ ಪ್ರಶ್ನೆ ತಕ್ಷಣವೇ ಹೊಳೆಯಲಿಲ್ಲ.

'ನಾನು ಸಾಹೇಬ್ರನ್ನು ನೋಡ್ಬೇಕು?'

'ಇರಿ, ಅವರು ಯಾವುದೋ ಕೇಸ್ನಲ್ಲಿ ಮುಳುಗಿದ್ದಾರೆ. ನಾನು ವಿಚಾರಿಸಿ ಕೊಂಡು ಬರ್ತೀನಿ. ಇಷ್ಟಕ್ಕೂ ತಮ್ಮ ಸಮಸ್ಯೆ ಏನು ಹೇಳಿ? ನಾನು ಅವರಿಗೆ ಹೇಳ್ಬೇಕಿದೆ' ಅನಗತ್ಯ ಮೂಗು ತೂರಿಸಿದ ಸಾರಂಗ.

'ಆ ವಿಷಯವನ್ನು ನಾನು ಸಾಹೇಬ್ರ ಬಳಿ ಮಾತಾಡ್ತೀನಿ. ಅದು ಗೌಪ್ಯವಾದ ವಿಷಯ. ಮೇನಕಾ ನಿಮ್ಮ ಜೊತೆ ಮಾತಾಡ್ಬೇಕೂಂತ ಬಂದಿದ್ದಾರೆ ಅನ್ನಿ. ಅಷ್ಟು ಸಾಕು' ಸಿಡುಕಿದಳು ಪಿಸಿಯ ಅನಗತ್ಯ ಪ್ರಶ್ನೆಗಳಿಗೆ.

ಪಿಸಿ ಸಾರಂಗ ಇನ್ಸ್‌ಪೆಕ್ಟರ್ ರಾಜಧಾನಿಯ ಛೇಂಬರಿನ ಬಾಗಿಲನ್ನು ಮೆತ್ತಗೆ ಕುಟ್ಟಿದ. ಫೈಲ್‌ನ ಒಳಗೆ ಮುಳುಗಿದ್ದ ಅಧಿಕಾರಿ ತಲೆಯೆತ್ತದೆ ನುಡಿದ.

'ಯಾರು, ಬನ್ನಿ ಒಳಗೆ'

'ಸಾರ್, ನಾನು ಸಾರಂಗ'

'ಏನಯ್ಯಾ, ಏನು ವಿಷ್ಯ?' ಫೈಲ್‌ನಿಂದ ಮುಖ ಎತ್ತದೆ ಕೇಳಿದ.

'ಸಾರ್, ನಿಮ್ಮನ್ನು ನೋಡೋದಿಕ್ಕೆ ಮೇನಕಾ ಅನ್ನೋ ಹುಡುಗಿ ಬಂದಿದ್ದಾಳೆ'

ಇನ್ಸ್‌ಪೆಕ್ಟರ್ ತಕ್ಷಣವೇ ತಲೆಯೆತ್ತಿ ಪಿಸಿಯನ್ನು ಆಶ್ಚರ್ಯದಿಂದ ನೋಡಿದ. ಆ ಹೊತ್ತಿಗೆ ಅವನಿಗೆ ಮೇನಕಾಳ ನೆನಪಾಗಲಿಲ್ಲ.

'ಯಾರು? ಮೇನಕಾನೇ?' ಆಶ್ಚರ್ಯ ಬೆರೆತ ದನಿಯಲ್ಲಿ ಕೇಳಿದ.

'ಹೌದು, ಸಾರ್. ಮೇನಕಾ. ಭುಜಂಗೇಶರಾಯರ ಮಗಳು. ಆ ದಿವ್ಸ ನಾವು ಫಾರ್ಮ್ ಹೌಸ್‌ಗೆ ಹೋದಾಗ ಇದ್ದಲ್ಲ ಆ ಹುಡುಗಿ ಸಾರ್'

ರಾಜಧಾನಿಗೆ ತಕ್ಷಣವೇ ನೆನಪಿಗೆ ಬಂತು. ಬೆಳಗ್ಗೆ ಅವಳನ್ನು ವಿಚಾರಿಸುವಾಗ ಯಾವ ಸುದ್ದಿಯನ್ನು ಹೇಳಿರದ ಹುಡುಗಿ. ಈಗ ಅವಳೇ ಠಾಣೆಯವರೆಗೆ ಬಂದಿದ್ದಾಳೆ. ಅಂದರೆ ಮುಖ್ಯವಾದ ವಿಷಯವನ್ನು ಮಾತನಾಡುವುದಕ್ಕೆ ಬಂದಿದ್ದಾಳೆ. ಇದು ಲಹರಿಯ ಕೇಸ್‌ಗೆ ಸಂಬಂಧಪಟ್ಟ ವಿಷಯವಾದರೆ ಕೇಸ್ ಸುಲಭದಲ್ಲಿ ಇತ್ಯರ್ಥವಾಗುತ್ತದೆ.

'ಎಸ್, ಅವರನ್ನು ಒಳಗೆ ಕಳುಹಿಸು' ತಾನು ನೋಡುತ್ತಿದ್ದ ಫೈಲನ್ನು ಪಿಸಿಯ ಕೈಯಲ್ಲಿ ಕೊಟ್ಟು ಅದನ್ನು ಬೀರುವಿನಲ್ಲಿ ಭದ್ರವಾಗಿರಿಸಲು ಹೇಳಿದ.

ಪಿಸಿ ಸಾರಂಗ ಫೈಲನ್ನು ಬೀರಿವಿಗೆ ಸೇರಿಸಿ ಬೀಗ ಜಡಿದ. ಅಧಿಕಾರಿಯ ಛೇಂಬರ್‌ನಿಂದ ಹೊರಗೆ ಬರುತ್ತಲೇ ಅವನಿಗೆ ಸೆಲ್ಯೂಟ್ ಹೊಡೆದ. ಹೊರಗೆ ಬರುವಾಗ ಮೇನಕಾ ಸೋಫಾದಲ್ಲಿ ಕುಳಿತಿರುವುದು ಕಂಡಿತು.

'ಮೇಡಂ, ಬನ್ನಿ ಸಾಹೇಬ್ರು ನಿಮ್ಮನ್ನು ಕರಿತಿದ್ದಾರೆ' ಅವಳ ವಿಶ್ವಾಸವನ್ನು ಗಳಿಸುವಂತೆ ಮೆತ್ತನೆಯ ದನಿಯಲ್ಲಿ ಹೇಳಿದ.

ಮೇನಕಾ ಪಿಸಿಗೆ ಕೃತಜ್ಞತೆಯನ್ನು ಸೂಚಿಸಿ ಇನ್ಸ್‌ಪೆಕ್ಟರ್ ರಾಜಧಾನಿಯ ಛೇಂಬರಿನ ಬಾಗಿಲಿನ ಬಳಿ ನಿಂತಳು.

'ನಾನು ಒಳಗೆ ಬರಲೆ' ಸೌಜನ್ಯದ ಪದಗಳನ್ನು ಬಳಸಿ ಕೇಳಿದಳು.

'ಎಸ್, ಬನ್ನಿ ಬನ್ನಿ...' ಆಹ್ವಾನಿಸಿದ ಅಧಿಕಾರಿ ಅವಳನ್ನು ಕುಳಿತಿರುವಂತೆ ಸೂಚಿಸಿದ.

'ಮೇಡಂ, ಕುಡಿಯುವುದಕ್ಕೆ ಏನಾದರೂ ತಗೋತೀರೇನು?' ಔಪಚಾರಿಕವಾಗಿ ಮಾತನಾಡಿದ.

'ನೋ ಥ್ಯಾಂಕ್ಸ್' ಛೇಂಬರಿನ ಸುತ್ತಲೂ ಕಣ್ಣಾಡಿಸಿದಳು. ವ್ಯವಸ್ಥಿತವಾಗಿ ಕೋಣೆಯಲ್ಲಿಯ ವಸ್ತುಗಳನ್ನು ಜೋಡಿಸಲಾಗಿತ್ತು.

ಮೇನಕಾಳ ನೋಟದಲ್ಲಿ ಅದೇನೋ ಆತಂಕವಿರುವುದನ್ನು ಗಮನಿಸಿದ ಇನ್ಸ್‌ಪೆಕ್ಟರ್ ಅವಳನ್ನು ವಿಚಾರಿಸಿದ.

'ಮೇಡಂ, ನೀವೇನೋ ದೊಡ್ಡ ಸಮಸ್ಯೆಯಲ್ಲಿ ಮುಳುಗಿದವರಂತೆ ಕಾಣ್ತಿದ್ದೀರಿ. ಅದೇನೂಂತ ಹೇಳಬಹುದೆ?' ಅಧಿಕಾರಿಯ ಅನಿರೀಕ್ಷಿತ ಪ್ರಶ್ನೆಗೆ ತತ್ತರಿಸಿದವಳು ಬೆದರಿದ ನೋಟವನ್ನು ಅಧಿಕಾರಿಯತ್ತ ಹೊರಳಿಸಿದಳು.

'ಸಾರ್, ಒಂದು ಅನಾಮಧೇಯ ಪತ್ರ ಬಂದಿತ್ತು' ಮಾತು ತಡವರಿಸಿತು. ಅಧಿಕಾರಿಯ ಬಾದಾಮಿಯಾಕಾರದ ದೊಡ್ಡ ಕಣ್ಣುಗಳು ಅಗಲಕ್ಕೆ ತೆರೆದುಕೊಂಡವು.

'ಅನಾಮಧೇಯ ಪತ್ರ? ನಿಮ್ಮ ಹೆಸರಿಗೆ?' ಅಚ್ಚರಿಯಿಂದ ಕೇಳಿದ.

'ಇಲ್ಲ, ನಮ್ಮ ಮನೆಯ ಬಾಗಿಲಿಗೆ ಸಿಕ್ಕಿಸಿತ್ತು. ಅದನ್ನು ನನ್ನ ಚಿಕ್ಕಮ್ಮಾ ನೋಡ್ಬಿಟ್ಟು ತೆಗೆದು ಓದಿದ್ರು. ಅವರಿಗೆ ಆತಂಕ ಶುರುವಾಯ್ತು. ಅದಕ್ಕೆ ಅದನ್ನು ಹಿಡಿಕೊಂಡು ನಿಮ್ಮಲ್ಲಿಗೆ ಬಂದೆ'

ಇನ್ಸ್‌ಪೆಕ್ಟರ್‌ನ ಮುಖದ ಬಣ್ಣ ಬದಲಾಯಿತು. ತನ್ನೆದುರಿಗೆ ಕುಳಿತ ಹುಡುಗಿ ಸುಳ್ಳು ಹೇಳುತ್ತಿದ್ದಾಳೆ. ಬೆಳಿಗ್ಗೆ ಕೋರ್ಟ್‌ಗೆ ಹೊರಡುವಾಗ ಅವಳು ರಸ್ತೆಯಂಚಿಗೆ ಕಾರು ನಿಲ್ಲಿಸಿ ಅಲ್ಲಿ ಅಲೆದಾಡುವುದನ್ನು ಕಂಡಿದ್ದ. ಆ ಪತ್ರಕ್ಕೆ ಸಂಬಂಧಪಟ್ಟಂತೆ ಯಾರನ್ನೋ ಹುಡುಕುತ್ತಿದ್ದಿರಬೇಕು. ತನ್ನ ಅನಿರೀಕ್ಷಿತ ಆಗಮನದಿಂದ ಅವಳು ಬೆಪ್ಪಾಗಿದ್ದನ್ನು ಗುರುತಿಸಿಕೊಂಡಿದ್ದ. ಈಗ ಅವಳು ಹುಡುಕುವ ವ್ಯಕ್ತಿ ಸಿಗದೆ ತನ್ನ ಬಳಿ ಸಹಾಯಕ್ಕೆ ಆಗಮಿಸಿದ್ದಾಳೆ.

'ಮೇನಕಾ, ನೀವು ನೇರವಾಗಿ ನನ್ನಲ್ಲಿಗೆ ಬಂದಿಲ್ಲ. ಆ ಪತ್ರ ಬರೆದ ವ್ಯಕ್ತಿಯನ್ನು ನೀವೇ ಹುಡುಕುವ ಪ್ರಯತ್ನ ಮಾಡ್ತಿದ್ದೀರಿ, ಅಲ್ಲವೆ?'

ಮೇನಕಾಳ ಕೊರಳು ಕಂತಿತು. ನೋಟ ಮೇಜಿನ ಮೇಲೆ ಹರಿಯಿತು.

'ಹೌದು, ಪತ್ರ ಬರೆದ ವ್ಯಕ್ತಿ ನಿರ್ದಿಷ್ಟ ಸ್ಥಳಕ್ಕೆ ಬರುವಂತೆ ಸೂಚಿಸಿದ್ದ. ಆ ಸ್ಥಳಾನ ಹುಡುಕಾಡ್ತಿದ್ದೆ' ದನಿ ನೀರಸವಾಗಿತ್ತು.

'ಐಸೀ, ಹಾಗೋ... ಅವನೇನು ಬರ್ದಿದ್ದ ಅದರಲ್ಲಿ? ಪತ್ರ ಎಲ್ಲಿದೆ?'

'ಮೂರು ಲಕ್ಷ ಡಿಮಾಂಡ್ ಮಾಡಿದ್ದ. ಜೊತೆಗೆ ಅವನನ್ನು ಸಿಟಿಯಿಂದ ಹೊರಗಿರೋ ಹಳೇ ಕಾಲದ ಕಟ್ಟಡದಲ್ಲಿ ಭೇಟಿಯಾದ್ರೆ ಲಹರಿಯ ವಿಷಯವನ್ನೂ ಹೇಳುವುದಾಗಿ ಬರೆದಿದ್ದ'

'ಅದಕ್ಕೆ ನೀವು ಅಲ್ಲಿ ಅಲೆದಾಡ್ತಾ ಇದ್ರಿ? ನಿಮಗೆ ಆತ ಸಿಗಲಿಲ್ಲ ಅಥವಾ ಆ ಹಳೇ ಕಾಲದ ಕಟ್ಟಡ ನಿಮ್ಮ ಕಣ್ಣಿಗೆ ಕಾಣಿಸ್ಲಿಲ್ಲ. ಈಗ ನನ್ನತ್ರ ಸಹಾಯ ಕೇಳ್ಕೊಂಡು ಬಂದಿದ್ದೀರಿ? ಒಂದು ಮಾತು ಕೇಳ್ತೀನಿ ನೀವು ಬೇಸರ ಪಟ್ಕೊಳ್ಬೇಡಿ. ಲಹರಿಯ ವಿಷಯಗಳೇನಿದ್ರೂ ನೀವು ಠಾಣೆಗೆ ತಿಳಿಸ್ಬೇಕೂಂತ ನಿಮ್ಮನ್ನು ಎಚ್ಚರಿಸಿದ್ದೆ. ನೀವು ಆ ಕೆಲಸ ಮಾಡ್ತಾ ಇಲ್ಲ. ಬದಲಾಗಿ ನೀವೇ ಅವಳ ಕೇಸನ್ನು ಕೈಗೆ ತೆಗೆದುಕೊಂಡ ಹಾಗೆ ವರ್ತಿಸ್ತೀರಿ. ಇದರಿಂದ ನಮ್ಮ ಇಲಾಖೆ ಲಹರಿಯ ಕಣ್ಮರೆಯಲ್ಲಿ ನಿಮ್ಮ ಪಾತ್ರ ಇದೇಂತ ಅನುಮಾನ ಪಡ್ತದೆ, ಮೇನಕಾ' ಅಧಿಕಾರಿಯ ಮಾತಿಗೆ ತತ್ತರಿಸಿದವಳು ಇಲ್ಲವೆನ್ನುವಂತೆ ಅಡ್ಡಡ್ಡಲಾಗಿ ತಲೆಯಲುಗಿಸಿದಳು.

* * *

ಇನ್ಸ್‌ಪೆಕ್ಟರ್ ರಾಜಧಾನಿಯ ಮಾತಿನಿಂದ ಆತಂಕಗೊಂಡ ಮೇನಕಾಳ